ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಗುರುವಾರ ದಿನಾಂಕ ೨೧ನೇ ಡಿಸೆಂಬರ್ ೧೯೮೯ ಮಾರ್ಗಶಿರ ೩೦ ಶಕ ೧೯೧೧

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೯-೦೨ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ)ಅವರು ಪೀಠವನ್ನು ಅಲಂಕರಿಸಿದರು.]

ಸಭೆಯು ಮುಂದಿಡಲಾದ ಕಾಗದಪತ್ರಗಳು

SRI M. RAJASHEKHARA MURTHY(Minister for Finance, Institutional Finance and Statistics).—Sir, I lay.

"The Report of the Comptroller and Auditor General of India pertaining to Government of Karnataka for the year 1987-88 (Revenue Receipts] as required under Article 151 (2) of the Constitution of India"

MR SPEAKER.—Papers laid.

ಮಂನವಿಗಳು

ರಾಜ್ಯದಲ್ಲಿ ವಿದ್ಯುಚ್ಛಕ್ತಿ ಅಭಾವದಿಂದ ರೈತರಿಗಾದ ತೊಂದರೆ

ಶ್ರೀ ಎಂ. ಪಿ. ವೆಂಕಟೇಶ.—ಮಾನ್ಯ ಅಧ್ಯಕ್ಷರೇ. ಎರಡು ವರ್ಷಗಳಿಗೂ ಮೇಲ್ಪಟ್ಟು ವಿದ್ಯುತ್ ಪೂರೈಕೆಯಲ್ಲಿ ಇಳಿತ ಹಾಗೂ ನೀರಾವರಿ.....

ಅಧ್ಯಕ್ಷರು.—ಶ್ರೀ ವೆಂಕಟೇಶ್‌ರವರೇ. ಮಾನ್ಯ ಹಣಕಾಸಿನ ಸಚಿವರು ಏನೋ ಹೇಳಬೇಕೆಂದು ಇದ್ದಾರೆ,

SRI M. RAJASHEKARA MURTHY.—Sir, I suggest that the statement for the calling attention will be made in the afternoon. In the meanwhile, legislative, business be taken up.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ನಿನ್ನೆ ತಾನೇ ನಾನು ಈ ಸಭೆಯಲ್ಲಿ ಮನವಿ ಮಾಡಿಕೊಂಡಿದ್ದೆ. ಮಾನ್ಯ ಸಚಿವರಿಗೆ ತಾವು ಸ್ವಲ್ಪ ಹೇಳಬೇಕು. ಸಭೆಯಲ್ಲಿ ಕನ್ನಡದಲ್ಲೇ ಕಾಗದ ಪತ್ರಗಳನ್ನು ಇಡಬೇಕೆಂದು ಹೇಳಿ, ನಾನು ಪದೆ ಪದೇ ಹೇಳುತ್ತಿದ್ದರೆ ಈ ವಾಟಾಳ್ ನಾಗರಾಜ್ ಪದೇ ಪದೇ ಎದ್ದುನಿಂತು ಕನ್ನಡ ಕನ್ನಡ ಎಂದು ಹೇಳುತ್ತಾರೆ ಎಂದು ಅವರ ಮನಸ್ಸಿನಲ್ಲಿ ಏನೋ ಆಗಬಹುದು. ನಾನು ತಮ್ಮ ಮೂಲಕ ಹೇಳುತ್ತಿದ್ದೇನೆ. ಪ್ರತಿಯೊಬ್ಬ ಮಂತ್ರಿಗಳಿಗೂ ಇದು ಅನ್ವಯವಾಗಬೇಕು. ಸರ್ಕಾರದ ಕಡೆಯಿಂದ ಬರತಕ್ಕದ್ದು ಮತ್ತು ವಿರೋಧ ಪಕ್ಷದ ಕಡೆಯಿಂದ ಯಾರು ಮಾತನಾಡಿದರೂ ಸ್ವಲ್ಪ ದಯವಿಟ್ಟು ಹೇಳಿ. ಮಾನ್ಯ ರಾಜಶೇಖರಮೂರ್ತಿಯವರು ಇಲ್ಲಿಯವರೆಗೆ ನಾನು ಗಮನಿಸುತ್ತಿದ್ದಂತೆ ಪ್ರತಿಯೊಂದನ್ನೂ ಇಂಗ್ಲೀಷಿನಲ್ಲೇ ತಮ್ಮ ವ್ಯವಹಾರಗಳನ್ನು ಮಾಡುತ್ತಿದ್ದಾರೆ. ಇದಕ್ಕೆ ಅಕ್ಷೇಪಣೆ ತರತಕ್ಕದ್ದು ಎಂದು ಅಲ್ಲ. ಇದು ಒಂದು ಸಂಪ್ರದಾಯ ಎಂದು ಮಾಡಿಕೊಳ್ಳಬೇಕು.

ಅಧ್ಯಕ್ಷರು.—ಶ್ರೀ ರಾಜಶೇಖರ್‌ಮೂರ್ತಿಯವರೇ, ಈ ಸೂಚನೆಯನ್ನು ಮಾತ್ರ ಮಧ್ಯಾಹ್ನ ತೆಗೆದುಕೊಳ್ಳಬೇಕೆಂದು ಹೇಳಿದ್ದೀರಿ ಅಲ್ಲವೆ ?

ಶ್ರೀ ಎಂ. ರಾಜಶೇಖರಮೂರ್ತಿ.—ಹೌದು,

ಅಧ್ಯಕ್ಷರು.—ಆಗಬಹುದು ಇದನ್ನು ಮಧ್ಯಾಹ್ನ ತೆಗೆದುಕೊಳ್ಳೋಣ. ಈಗ ಎರಡನೇ ಗಮನ ಸೆಳೆಯುವ ಸೂಚನೆ. ಶ್ರೀ ಎ. ಎಂ. ಹಿಂಡಸಗೇರಿಯವರೇ, ನೀವು ಸರ್ಕಾರದ ಗಮನ ಸೆಳೆಯಬಹುದು

ಶ್ರೀ ಎ. ಎಂ. ಹಿಂಡಸಗೇರಿ.—ಮಾನ್ಯ ಅಧ್ಯಕ್ಷರೇ. ಹುಬ್ಬಳ್ಳಿ ಧಾರವಾಡ ಮಹಾನಗರಸಭೆಯ ವ್ಯಾಪ್ತಿಯಲ್ಲಿರುವ ಕುಡಿಯುವ ನೀರಿನ ಶೇಪ್ರ ಕೊರತೆ ಹಾಗೂ ಮುಂದೆ, ಪರಿಸ್ಥಿತಿಯನ್ನು ಸುಧಾರಿಸಲು ಕೊಳವೆ ಬಾವಿಗಳನ್ನು ತೋಡಿಸುವುದಕ್ಕೆ ಸಂಬಂಧಿಸಿದಂತೆ ಸರ್ಕಾರದವರು ಕೈಕೊಂಡ ಕ್ರಮದ ಬಗ್ಗೆ ಮುಖ್ಯಮಂತ್ರಿಯವರ ಗಮನ ಸೆಗೆಯುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ ಇದನ್ನೂ ಮಧ್ಯಾಹ್ನದ ಮೇಲೆ ತೆಗೆದುಕೊಂಡರೆ ಒಳ್ಳೆಯದು.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಈ ಪ್ರಕಾರ ನಡೆದರೆ ಹೇಗೆ ? ಮೊದಲನೆಯ ವಿಷಯಕ್ಕೆ ಟೈಮ್ ಬೇಕು ಎಂದರು, ಈಗ ಎರಡನೆಯದಕ್ಕೂ ಟೈಮ್ ಬೇಕೆಂದು ಕೇಳಿದರೆ ಸರಿಯಾಗುತ್ತದೆಯೇ ? ಸರ್ಕಾರಕ್ಕೆ ತೊಂದರೆ ಇರಬಹುದು, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾವೂ ಕೂಡ ಅಲ್ಲಿ ಕೆಲಸ ಮಾಡಿ, ಇವತ್ತು ಇಲ್ಲಿಗೆ ಬಂದಿದ್ದೇವೆ. ಎಲ್ಲಾ ಗಮನ ಸೆಳೆಯುವ ಸೂಚನೆಗಳನ್ನೂ ಮುಂದೂಡಿದರೆ ಹೇಗೆ ?

† ಶ್ರೀ ಬಿ. ಎಸ್, ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ನಾವು ಕೇವಲ ನಾಲ್ಕಾರು ದಿವಸಗಳ ಕಾಲ ಸಭೆ ಸೇರುತ್ತಿದ್ದೇವೆ. ಇನ್ನೂ ರಾಜ್ಯಪಾಲರ ಭಾಷಣದ ಮೇಲೆಯೂ ಮಾತನಾಡಬೇಕಾಗಿದೆ, ನಾಳೆ ಈ ಸದನವನ್ನು ಮುಗಿಸಬೇಕೆಂದು, ನಾವೆಲ್ಲರೂ ಸಲಹಾ ಸಮಿತಿಯಲ್ಲಿ ಒಪ್ಪಿದ್ದೇವೆ. ಆದ್ದರಿಂದ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ವಿದ್ಯುತ್ ವ್ಯವಸ್ಥೆಯಲ್ಲಿ ತೊಂದರೆಯಾಗಿರುವ ಬಗ್ಗೆ ಕೇಳುತ್ತಿದ್ದೇವೆ. ಇದಕ್ಕೆ ಉತ್ತರವನ್ನು ಸಿದ್ಧತೆ ಮಾಡಿಕೊಂಡು, ಸರ್ಕಾರದವರು ಉತ್ತರ ಕೊಡಬೇಕಾಗುತ್ತದೆ. ಕೆಲವೊಂದು ಸಲ ಸಮಯದ ಅಭಾವದಿಂದ, ಅನಿವಾರ್ಯವಾಗಿ ಸ್ವಲ್ಪ ತಡವಾಗುತ್ತದೆಂದು ಮಂತ್ರಿಗಳು ಹೇಳಿದರು. ಆದರೆ ಸರ್ಕಾರದ ಕಡೆಯಿಂದ ಈ ತರಹ ಉತ್ತರ ಬಂದರೆ ಹೇಗೆ ? ಇದರ ಬಗ್ಗೆ ಚಿಂತನೆ ಮಾಡುವುದಕ್ಕೆ ಸಮಯವಿಲ್ಲವೇ. ಅಥವಾ ಯಾವುದಾದರೂ ಗೊಂದಲದಲ್ಲಿ ಸಿಕ್ಕಿದ್ದಾರೆಯೇ ಎಂದು ಕೇಳಬೇಕಾಗಿದೆ, ಅತ್ಯಂತ ಪ್ರಮುಖವಾದ ವಿಷಯವನ್ನು ಕೇಳುವಾಗ, ಈಗ ಬಿಡುವು ಇಲ್ಲ. ಸಮಯದ ಅಭಾವ ಎಂದು ಹೇಳಿದರೆ ಸರಿಯಲ್ಲ. ನಾನು ಇದನ್ನು ಜನತೆಯ ಹಿತದೃಷ್ಟಿಯಿಂದ ಹೇಳುತ್ತಿದ್ದೇನೆ ಆ ಕಡೆಯಲ್ಲಿರುವವರಿಗೆ ನನ್ನ ಮಾತಿನಿಂದ ಸ್ವಲ್ಪ ನೋವಾಗಬಹುದು, ಆದರೆ ನಾನು ಇದನ್ನು ಹೇಳದೇ ಹೋದರೆ, ನನ್ನ ಕರ್ತವ್ಯಚ್ಯುತಿಯಾಗುತ್ತದೆ. ಪ್ರಾಮುಖ್ಯವಾದ ವಿಷಯದ ಬಗ್ಗೆ ತಾವು ಉತ್ತರ ಕೊಡಲೇಬೇಕು.

ಶ್ರೀ ಎಂ. ರಾಜಶೇಖರಮೂರ್ತಿ.—ನಾವು ಅನಾವಶ್ಯಕವಾಗಿ ಟೈಮ್ ಕೇಳುತ್ತಾ ಇಲ್ಲ. ಅಜೆಂಡಾ ಪ್ರಕಾರ ಇದು ಮೂರನೆಯ ವಿಷಯ. ಎರಡನೇ ವಿಷಯ ಸ್ಥಳೀಯ ಸಂಸ್ಥೆಗಳ ಕಾನೂನು ತಿದ್ದುಪಡಿ ವಿಧೇಯಕ. ಇದು ನಂತರ ಬರಬಹುದೆಂದು ಸಂಬಂಧಪಟ್ಟ ಮಂತ್ರಿಗಳು ಇಲ್ಲಿ ಬಂದಿಲ್ಲ, ಸ್ಟೇಟ್‌ಮೆಂಟ್ ರಡಿ ಇಲ್ಲ ಎಂದು ಹೇಳಲಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇಂತಹ ಪ್ರಮುಖ ವಿಷಯ ಇರಬೇಕಾದರೆ, ಮಾನ್ಯ ಮಂತ್ರಿಗಳೂ ಕೂಡ ೯ ಗಂಟೆಗೆ ಬರುವುದನ್ನು ಅಭ್ಯಾಸ ಮಾಡಬೇಕು. ಜನತೆಯ ಸಮಸ್ಯೆಯ ಬಗ್ಗೆ ಸರ್ಕಾರದ ಕಳಕಳಿಯೂ ಇರಬೇಕಾಗುತ್ತದೆ. ಒಂದು ವೇಳೆ ತಮಗೆ ಸಮಯ ಇಲ್ಲದೇಹೋದರೆ, ೧೧ ಗಂಟೆಗೇ ಸಭೆ ಸೇರೋಣ. ಇವತ್ತು ಅನಿವಾರ್ಯ ಕಾರಣ ಇರಬಹುದು, ಆದರೆ ಯಾರು ಉತ್ತರ ಕೊಡಬೇಕೆಂಬ ಕಲ್ಪನೆ ಇಲ್ಲದೇ ಹೋದರೆ ಏನು ಮಾಡುವುದು ?

ಅಧ್ಯಕ್ಷರು.—ಈ ವಿಷಯದಲ್ಲಿ ನನ್ನ ಕಛೇರಿಯಲ್ಲೇ ಸ್ವಲ್ಪ ಆಚಾತುರ್ಯವಾಗಿದೆ. ಇದಕ್ಕೆ ಸದನದ ಕ್ಷಮೆ ಕೇಳುತ್ತೇನೆ. ಕಾರ್ಯಕ್ರಮದ ಪಟ್ಟಿಯ ಪ್ರಕಾರ, ಮಾನ್ಯ ಹಣಕಾಸಿನ ಸಚಿವರು ಹೇಳಿದರೀತಿ. ಸಭೆಯ ಮುಂದೆ ಮಂಡಿಸಲಾಗುವ ಕಾಗದ ಪತ್ರಗಳು, ಎರಡನೇ ವಿಷಯ ಸ್ಥಳೀಯ ಸಂಸ್ಥೆಗಳ ಕಾನೂನು ತಿದ್ದುಪಡಿ ವಿಧೇಯಕ, ಆಮೇಲೆ ಮಿಕ್ಕ ವಿಚಾರಗಳನ್ನು ತೆಗೆದುಕೊಳ್ಳಬೇಕೆಂದು

ಇದೆ. ಈ ರೀತಿ ಪುನಃ ಇಂತಹ ಘಟನೆ ಮರುಕಳಿಸದಂತೆ ಸರ್ಕಾರ ಮತ್ತು ನನ್ನ ಕಛೇರಿ ಕ್ರಮ ತೆಗೆದುಕೊಳ್ಳುತ್ತದೆ ಎಂಬ ಭರವಸೆಯನ್ನು ಕೊಡುತ್ತೇನೆ.

ಶ್ರಿ ವಾಟಾಳ್ ನಾಗರಾಜ್.—ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯುವಾಗ ಅನೇಕ ವಿಷಯಗಳನ್ನು ಹೇಳಬೇಕಾಗುತ್ತದೆ. ಆಗ ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿ ಕುಳಿತುಕೊಂಡಿದ್ದರೆ, ಅವರು ಗಮನಹರಿಸತಕ್ಕಂಥ ವಿಷಯಗಳನ್ನು ಹೇಳಬಹುದು. ನಿನ್ನೆ ಕೂಡ ಬಹಳ ಹೊತ್ತು ಅವರು ಸಭೆಯಲ್ಲಿ ಇರಲಿಲ್ಲ. ಆದ್ದರಿಂದ ತಾವು ದಯವಾಡಿ ತಾವು ಅವರನ್ನು ಸಭೆಗೆ ಕರೆಯಿಸಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೆ ನಾನೂ ಕೂಡ ಎರಡು ಗಮನ ಸೆಳೆಯುವ ಸೂಚನೆಗಳನ್ನು ಕಳುಹಿಸಿದ್ದೆ. ಪತ್ರ ಬರೆದು ಕಳುಹಿಸಿದರೂ ಅದಕ್ಕೆ ಉತ್ತರ ಬರುವುದಿಲ್ಲ. ಹೇಗೆ ಕೇಳಿದರೂ ಉತ್ತರ ಬರುವುದಿಲ್ಲ. ಈಗಲೂ ನನ್ನ ಕೈಯಲ್ಲಿ ಎರಡು ಕಾಲಿಂಗ್ ಅಟೆನ್‌ಷನ್ಸ್ ಇವೆ, ತಾವು ಕೇಳಿ ಎಂದರೆ ಕೇಳುತ್ತೇನೆ. ನಿನ್ನೆ ಮಧ್ಯಾಹ್ನ ಕಛೇರಿಯಿಂದ ಎಲ್ಲಾ ಫಾರಂಗಳನ್ನೂ ತರಿಸಿ, ಭರ್ತಿ ಮಾಡಿ ವ್ಯವಸ್ಥಿತವಾಗಿ ಕಳುಹಿಸಿದರೂ ತಾವು ಒಪ್ಪುತ್ತಾ ಇಲ್ಲ.

ಅಧ್ಯಕ್ಷರು.—ನೀವು, ಈ ತಕ್ಷಣ ಗಮನ ಸೆಳೆಯುವುದಕ್ಕಾಗುವುದಿಲ್ಲ. ಇದಕ್ಕೆ ಯಾವ ಮಾರ್ಗ ಅನುಸರಿಸಬೇಕೆಂದು ಹೇಳುತ್ತೇನೆ. ಈಗ ಮಾನ್ಯ ವಿರೋಧಪಕ್ಷದ ನಾಯಕರು ಒಪ್ಪಿಗೆ ಕೊಡುವುದಾದರೆ, ಕರ್ನಾಟಕ ಸ್ಥಳೀಯ ಸಂಸ್ಥೆಗಳ ಶಿದ್ದುಪಡಿ ವಿಧೇಯಕವನ್ನು ಈಗ ತೆಗೆದುಕೊಂಡು, ಮುಗಿಸಿ ಅನಂತರ ಉಳಿದ ಕಾರ್ಯಕಲಾಪಗಳನ್ನು ನಾವು ತೆಗೆದುಕೊಳ್ಳಬಹುದು. ಇದು ತಾಂತ್ರಿಕವಾಗಿ ಬಹಳ ಮಹತ್ವವಾಗಿರದೇ ಇದ್ದರೂ ಕೂಡ ಬಹಳ ಪ್ರಾಮುಖ್ಯವಾದ ತಿದ್ದುಪಡಿ.

ಶಾಸನ ರಚನಾ ಕಾರ್ಯಕಲಾಪಗಳು

೧೯೪೯ನೇ ಇಸವಿಯ ಕರ್ನಾಟಕ ಸ್ಥಳೀಯ ಸ್ಥಂಸ್ಥೆಗಳ ಕಾನೂನು (ತಿದ್ದುಪಡಿ)

ವಿಧೇಯಕ (ಅಂಗೀಕೃತವಾಯಿತು)

೧೯೪೯ನೇ ಇಸವಿಯ ಕರ್ನಾಟಕ ಸ್ಥಳೀಯ ಸಂಸ್ಥೆಗಳ ಕಾನೂನು (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ವಾರ್ತಾ ಸಚಿವರು).—

ಮಾನ್ಯ ಅಧ್ಯಕ್ಷರೇ, ಪ್ರಸ್ತಾವ ಏನೆಂದರೆ,

"೧೯೪೯ನೇ ಇಸವಿಯ ಕರ್ನಾಟಕ ಸ್ಥಳೀಯ ಸಂಸ್ಥೆಗಳ ಕಾನೂನು (ತಿದ್ದುಪಡಿ) ವಿಧೇಯಕವನ್ನು ಈ ಸಭೆಯು ಪರ್ಯಾಲೋಚಿಸಬೇಕೆಂದು ಕೋರಿಂತ್ತೇನೆ".

ಪ್ರಸ್ತಾವವನ್ನು ಮಂಡಿಸಲಾಯಿತು,

† ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಈ ಯಾವ ಒಂದು ಮಸೂದೆ ಇದೆ ಇದರಲ್ಲಿ ಎರಡು ಭಾಗ ಇದೆ. ಒಂದನೆಯದು ಮತದಾರರ ಪಟ್ಟಿ ಏನು ಇದೆ ಇದರಲ್ಲಿ, ಮುನಿಸಿಪಲ್ ಆಕ್ಟ್, ಕಾರ್ಪೊರೇಷನ್ ಆಕ್ಟ್ ಮತ್ತು ಜಿಲ್ಲಾ ಪರಿಷತ್ ಕಾನೂನಿನ ಪ್ರಕಾರ ೧೮ ವರ್ಷಕ್ಕೆ ಮೇಲ್ಪಟ್ಟವರನ್ನು ಇದರಲ್ಲಿ ಸೇರಿಸಬೇಕೆಂದು ಇವೆ. ಈ ಮೂರು ವಿಧೇಯಕಗಳಲ್ಲೂ, ಈ ಒಂದು ಕಾನೂನು ಇದೆ. ಆದರೆ ತಮಗೆ ಗೊತ್ತಿರುವಹಾಗೆ ಅನಂತರ ಸಂವಿಧಾನ ತಿದ್ದುಪಡಿ ಆದಮೇಲೆ ರೆಪ್ರೆಸೆಂಟೇಷನ್ ಆಫ್ ಪೀಪಲ್ ಆಕ್ಟ್ ಪ್ರಕಾರ ೧೮ ವರ್ಷಕ್ಕೆ ಮೇಲ್ಪಟ್ಟವರನ್ನು ಕೂಡಾ ಮತದಾರರ ಪಟ್ಟಿಯಲ್ಲಿ ಸೇರಿಸಬೇಕೆಂದು ಮೊನ್ನೆ ನಡೆದ ಚುನಾವಣೆಯಲ್ಲಿ ಸೇರಿಸಿದ ಕಾರಣ, ಇದರ ಬಗ್ಗೆ ಯಾವ ಒಂದು ಈ ಮೂರು ವಿಧೇಯಕಗಳಲ್ಲಿ ಈ ಪ್ರಾವಿಜನ್ ಇದೆ, ಅದು ಬೇಕಾಗಿಲ್ಲ. ಇಲ್ಲದಿದ್ದರೆ ಏನಾಗುತ್ತದೆ ಎಂದರೆ ಚುನಾವಣಾ ಕಾಲದಲ್ಲಿ ಅನಾವಶ್ಯಕವಾದಂಥ ಪದ್ಧತಿಯನ್ನು ನಾವು ಅನುಸರಿಸಬೇಕಾದಂಥ, ಪರಿಸ್ಥಿತಿ ಬರುತ್ತದೆ. ಆದುದರಿಂದ ಈ ಒಂದು ಮುನಿಸಿಪಲ್, ಕಾರ್ಪೊರೇಷನ್ ಮತ್ತು